ಅ) 1998-99ನೇ ಸಾಲಿನಲ್ಲಿ ರಟ್ಟೀಹಳ್ಳಿ ವಿಭಾಗದ ಕಾಮಗಾರಿಗೆ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

1.	ಕಾಲುವೆ ಮತ್ತು ಉಪಕಾಲುವೆ	ರೂ. 0.86 ಲಕ್ಷಗಳು
2.	ರಸ್ತೆಗಳು	-
3.	ಹೊಸ ಸರಬರಾಜು	ರೂ. 0.15 ಲಕ್ಷಗಳು
4.	ದುರಸ್ಥಿ ಮತ್ತು ಸಾಗಣೆ	ರೂ. 2.86 ಲಕ್ಷಗಳು
5.	ಕಟ್ಟಡಗಳು	ರೂ. 28.45 ಲಕ್ಷಗಳು
		ಒಟ್ಟು ರೂ. 32.32 ಲಕ್ಷಗಳು

ಬಿಜಾಪುರ ಜಲ್ಲೆಯಲ್ಲಿ ಮದ್ಯದ ಅಂಗಡಿಗಳಿಗೆ ಪರವಾನಗಿ.

1630(2374)ಶ್ರೀ ಬಸನಗೌಡ ರಾಮನಗೌಡ ಪಾಟೀಲ ಯತ್ನಾಳ (ಬಿಜಾಪುರ) :— ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಿಜಾಪುರ ಜಿಲ್ಲೆಯಲ್ಲಿ 1998-99ರ ಅವಧಿಯಲ್ಲಿ ಪರವಾನಗೆ ನೀಡಲಾದ ಮದ್ಯದ ಅಂಗಡಿಗಳ ಒಟ್ಟು ಸಂಖ್ಯೆ ಎಷ್ಟು?

2) ಸಿಎಲ್-2, ಸಿಎಲ್-9 ಹೆಸರಿನಲ್ಲಿ ಪರವಾನಗಿ ನೀಡಿರುವವರ ಸಂಖ್ಯೆ ಎಷ್ಟು? (ಸಂಪೂರ್ಣ ಹೆಸರು ವಿವರ ನೀಡುವುದು)

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :—

1) 1998-99ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ನಾಲ್ಕು (4) ಸಿಎಲ್-9 ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆ.

2) ಸಿಎಲ್-9 ಪರವಾನಗಿ ಪಡೆದಿರುವವರ ವಿವರಗಳು ಈ ಕೆಳಕಂಡಂತಿವೆ.

	ತಾಲ್ಲೂಕು	ಸನ್ನದುದಾರರ ವಿವರ	ಸನ್ನದಿನ ವಿವರ	ವರ್ಷ
1	2	3	4	5
1)	ಬಿಜಾಪುರ	ಶ್ರೀ ಸಂದೇಶಪರಪ್ಪ ಪಾಟೀಲ ನಂ.4 ಬಿಜಾಪುರ	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
2)	--"--	ಶ್ರೀ ಮಡಿವಾಳಪ್ಪ ಮರಿಯಪ್ಪ 4ನೇ ವಾರ್ಡ್ ನಂ. 3 ಸಿಬಿಎಸ್ ನಂ.1604 1606, 1607, 1608 ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
3)	--"--	ಶ್ರೀ ಅಶೋಕ ಬಸಪ್ಪ ಹರಿಜನ ಗಂಗೋಳ್ಳಿ ರಾಮಣ್ಣ ಕಾಲೋನಿ ವಾರ್ಡ್ ನಂ. 7 ಸಿಬಿಎಸ್ ನಂ.890 891, ಪ್ಲಾಟ್ ನಂ.105, ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ
4)	--"--	ಶ್ರೀ ಶ್ಯಾಮಕೊರಗು ಪೂಜಾರಿ ಹೋಟೇಲ್ ಮಧುವನ್ ಇಂಟರ್ ನ್ಯಾಷನಲ್, ಸ್ಟೇಷನ್ ರಸ್ತೆ ಬಿಜಾಪುರ.	ಸಿಎಲ್-9	98-99ನೇ 2ನೇ ಅರ್ಧ ವರ್ಷಕ್ಕೆ

ಯಾವುದೇ ಸಿಎಲ್-2 ಸನ್ನದು ಮಂಜೂರು ಮಾಡಿರುವುದಿಲ್ಲ.

ಬಿಜಾಪುರ ತಾಲ್ಲೂಕಿನಲ್ಲಿ ಹಸಿರು ಕಾರ್ಡ್ ವಿತರಣೆ.

1631(2375) ಶ್ರೀ ಬಸನಗೌಡ ರಾಮನಗೌಡ ಪಾಟೀಲ್ (ಯತ್ನಾಳ್) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬಿಜಾಪುರ ತಾಲ್ಲೂಕಿನಲ್ಲಿ ವಿತರಿಸಲಾದ ಹಸಿರು ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು ;